ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 23ನೇ ಜನವರಿ 1895.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೈಸರ್ ಫಾರೆಸ್ಟ್ಯಾಣೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ಸಾದರ್ ಮಾಡಲ್ಪಟ್ಟಿರುವ 1892ನೇ ಇಸವಿ ಜೂ 2ನೇ ಮರಕುಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಪ್ರಾಯಿಷಾಗಿರುವ ಅದೇ ಇಸವಿ ಮೇ 11ನೇ ಮರ್ತುಂ ಇಸ್ತಿಹಾರನ್ನು ಬದಲಾಯಿಸಿ ಅಮಲ್ದಾರ್ ಮತ್ತು ಸವಾಲ್ದಾರ್‌ಗಳ ನಡವಳಿಕೆ ಬಗ್ಯೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತಿಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್ದಾರ್ರು ತಪ್ಪದೆ ತಾವೇನೇ ಆಯಾಯ ಹೋಬಳಿ ಕಸಬೆಯಲ್ಲಿ ಆಯಾಯ ಹೋಬಳಿ ಫಸಲನ್ನು ಹರಾಜು ಮಾಡುವರು. ಕಾರ್ತಿಕ ಫಸಲನ್ನು ಡಿಸೆಂಬರ್ ತಿಂಗಳಲ್ಲಿಯೂ ವೈಶಾಖಿ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್ದಾರ್ರು ಪ್ರಕಟಿಸುತ್ತಾರೆ.

(3) ಹರಾಜು ಷರತ್ತುಗಳೇನಂದರೆ.

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ ಮಾಡುವದಿಲ್ಲ.

(b) ಆಖೈರ್ ಜಡಸವಾಲ್ ಡಿಪ್ಯೂಟಿ ಕಮ್ಮಿಸನರ್ ಸಾಹೆಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೊ ಅಥವಾ ಇತರರ ಏಜಂಟರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಜಡಸವಾಲ್ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಮತ್ತು ರೂಪಾಯಿ 1ಕ್ಕೆ ಬಂದಾಣಿ ಮೇರಿಗೆ ಆಗುವ ಲೋಕಲ್ ಸೆಸ್ಸ್‌ನ್ನು ಸಹ ಹರಾಜು ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್ದಾರ್‌ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟನ್ನ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್ದಾರನನ್ನ ಗುರುಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್ದಾರನು ವೈಶಾಖಿ ಫಸಲನ್ನು ಜೂ 1ನೇ ತಾರೀಖು ಲಾಗಾಯತು ಡಿಸೆಂಬರ್ 31ರ ವರಿಗೂ, ಕಾರ್ತಿಕ ಫಸಲನ್ನು ಜನವರಿ 1ನೇ ತಾರೀಖು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ಎ. ನರಸಿಂಹಯ್ಯಂಗಾರ್,
ಫಾರ್ ಡಿಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖೆ.

ನೋಟಿಫಿಕೇಷ್ಣ.

ತಾರೀಖು 6ನೇ ಫಿಬ್ರವರಿ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟ್ ನಾರಾಯಣದುರ್ಗ ಫಾರೆಸ್ಟ್ ಬಾಬತು ಈ ಕೆಳಗೆ ವಿವರಿಸಿರುವ ಪಸಾರೆ ಜಿನಸಿಗಳು ಸ್ರ 1895ನೇ ಇಸವಿ ಮಾರ್ಚಿ ತಾರೀಖು 5ರಲ್ಲು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಶ್ರೀರಂಗಪಟ್ಣದ ಸಂದಲ್ ಕೋಠಿಯಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸು ತಪ್ಶೀಲ್.	ಸುಮಾರು ಮೊತ್ತ.	
	ಮಣ.	ಪೌ.
ಅಳಲೆಕಾಯಿ	2000	..
ಅರಗು	130	..

ಷರತ್ತು—ಮೈಸೂರು ಗೆಜೆಟ್ 93ನೇ ಜನವರಿ 12ನೇ ಮರ್ತುಮಿನಲ್ಲಿ ಜಪ್ತಿಯಿನೆ ಮತ್ತು ಬೊಂಬು ವಿಷಯದಲ್ಲಿ ಫಾಯಿಷ್ ಮಾಡಿರುವ 1892ನೇ ಇಸವಿ ನವಂಬರು 29ನೇ ಮರ್ತುಂ 7953-ಆರ್. ಎಫ್. 155—92ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷ್ಣ ಮೇರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.